(SRI C. H. LINGADEVARU).

to release from the reserve list certain servey numbers in Chiknayakanahalli Taluk which are not useful for tapping trees therein and also which contain no toddy trees for being given to landless raiyats for cultivation ;

(*b*) the decision taken by them in the matter ?

A.—Sri A. G. RAMACHANDRA RAO (Minister for Law and Education).—

(*a*) Yes.

(*b*) An extent of 31 acres 9 guntas in survey No. 125 of Muddanahalli Village, Chiknayakanahalli Taluk, will be released for cultivation purpose.

ಶ್ರೀ ಸಿ. ಎಚ್. ಲಿಂಗದೇವರು.—(*b*) ಪ್ರಶ್ನೆಗೆ ಉತ್ತರಕೊಟ್ಟಿರುವುದರಲ್ಲಿ ತಿಳಿಸಿರುವ ಸ್ಥಳದಲ್ಲಿ ಸಾಗುವಳಿಗೆ ಹೊಸದಾಗಿ ಕೂಡಲು ಜಮೀನು ಉಳಿದಿದೆಯೆ ?

*ಶ್ರೀ ಎ. ಜಿ. ರಾಮಚಂದ್ರರಾವ್.—ಜನವರಿ 1957ರಲ್ಲಿ ಈಚಲುವನವನ್ನು ಸಿರಾ ಮತ್ತು ಚಿಕ್ಕನಾಯಕನಹಳ್ಳಿ ತಾಲ್ಲೂಕುಗಳಲ್ಲಿ ಸಾಗುವಳಿಗೆ ಕೊಡಬೇಕೆಂದು ಅರ್ಜಿಹಾಕಿದರು. ನಂತರ ಆ ಜಮೀನು ಕೂಡ ಬಿಡುಗಡೆಯಾಯಿತು. ಈ ಮಧ್ಯದಲ್ಲಿ ತಾರೀಖು 16-12-1954ರಲ್ಲಿ ಪೂರ್ಣ ಪರಿಶೀಲನೆ ಮಾಡಿನೋಡಿದಾಗ ಈಚಲುವನ ಕೊಡಬೇಕಾಗಿಲ್ಲ, ಅಮೃತ ಮಹಲ್ ಕಾವಲಿದ್ದರೆ ಅದನ್ನು ಕೊಡಬೇಕೆಂದು ತೀರ್ಮಾನಕ್ಕೆ ಬರಲಾಯಿತು.

ಶ್ರೀ ಸಿ. ಎಚ್. ಲಿಂಗದೇವರು.—ಸುಮಾರು 10-15 ಸಾವಿರ ಎಕರೆಗಳವರೆಗೆ ಎಕರೆಗೆ ಹತ್ತು ಮರ ವಿದ್ದು ಟ್ಯಾಪಿಂಗಿಗೆ ಲಾಯಕ್ಕಿಲ್ಲದೆ ಇರುವ ಜಮೀನೇನಿದೆಯೋ ಅದನ್ನು ರಿಲೀಸ್ ಮಾಡಬೇಕೆಂದು ರೆವೆನ್ಯೂ ಅಧಿಕಾರಿಗಳು ಕೇಳಿರುವುದು ನಿಜವಲ್ಲವೆ ?

ಶ್ರೀ ಎ. ಜಿ. ರಾಮಚಂದ್ರರಾವ್.—ನಿಜ. ಆದರೆ ಅಮೃತಮಹಲ್ ಕಾವಲಿರುವುದರಿಂದ ಮೊದಲು ಅದನ್ನು ಕೊಟ್ಟು ಆದಾದಮೇಲೆ ಈಚಲು ವನ ಕೊಡಿ ಬೇಕೆಂದು ಆರ್ಡರಾಗಿದೆ.

ಶ್ರೀ. ಸಿ. ಎಚ್. ಲಿಂಗದೇವರು.—ಎಲ್ಲಿ ಅಮೃತ ಮಹಲ್ ಕಾವಲು ಜಮೀನಿದೆಯೆಂಬುದನ್ನು ಹೇಳುತ್ತೀರಾ ?

ಶ್ರೀ ಎ. ಜಿ. ರಾಮಚಂದ್ರರಾವ್.—ಆ ವಿವರ ಇಲ್ಲಿಲ್ಲ.

ಶ್ರೀ ಸಿ. ಎಚ್. ಲಿಂಗದೇವರು.—ಮುದ್ದೇನಹಳ್ಳಿ ಗ್ರಾಮದ 31 ಎಕರೆ 9 ಗುಂಟೆ ಜಮೀನನ್ನು ರಿಲೀಸ್ ಮಾಡಿದ್ದು ಯಾವಾಗ ?

ಶ್ರೀ ಎ. ಜಿ. ರಾಮಚಂದ್ರರಾವ್.—21-8-1954 ರಲ್ಲಿ ಎಂದು ಕಾಣುತ್ತದೆ.

ಶ್ರೀ ಸಿ. ಎಚ್. ಲಿಂಗದೇವರು.—ಈ ಜಮೀನನ್ನು ನಿಮ್ಮವರ್ಗದವರಿಗೆ ಕೊಟ್ಟಿದ್ದಿರೋ ಅಥವಾ ಜಮೀನಿದ್ದವರಿಗೆ ಕೊಟ್ಟಿದ್ದಿರೋ !

ಶ್ರೀ ಎ. ಜಿ. ರಾಮಚಂದ್ರರಾವ್.—ಯಾರ್ಯಾರಿಗೆ ಕೊಟ್ಟಿದೆಯೆಂಬ ವಿವರ ಇಲ್ಲಿಲ್ಲ. ತಿಳಿದು ಹೇಳಬೇಕು.

ಶ್ರೀ ಸಿ. ಎಚ್. ಲಿಂಗದೇವರು.—ಈಗಲೂ ಕೂಡ 8-10 ಮರಗಳಿದ್ದು ಟ್ಯಾಪಿಂಗಿಗೆ ಲಾಯಕ್ಕಿಲ್ಲದ ಈಚಲು ಮರಗಳಿರುವ ಪ್ರದೇಶವನ್ನು ಸಾಗುವಳಿಗೆ ಕೊಡಲು ಏರ್ಪಾಡು ಮಾಡುವಿರಾ ?

ಶ್ರೀ ಎ. ಜಿ. ರಾಮಚಂದ್ರರಾವ್.—ವಿಚಾರ ಮಾಡುತ್ತೇವೆ.

ಶ್ರೀ ಸಿ. ಟಿ. ಹನುಮಂತಯ್ಯ.—ಒಂದು ಎಕರೆಯಲ್ಲಿ ಎಷ್ಟು ಈಚಲು ಮರಗಳಿದ್ದರೆ ಸಾಗುವಳಿಗೆ ಆ ಜಮೀನು ಕೊಡಬಹುದೆಂದು ಕಾನೂನಿದೆ ?

ಶ್ರೀ ಎ. ಜಿ. ರಾಮಚಂದ್ರರಾವ್.—ಸಾಮಾನ್ಯವಾಗಿ ಚೆನ್ನಾಗಿ ಬೆಳೆದು ಉಪಯೋಗಕರವಾಗಿರುವ ನಾಲ್ಕು ಗಿಡಗಳಿದ್ದರೂ ಅದನ್ನು ಕೊಡುವುದಿಲ್ಲ.

ಶ್ರೀ ಜಿ. ಪುಟ್ಟಸ್ವಾಮಿ.—ಮರಗಳಿಲ್ಲದಿರುವ ಈಚಲು ವನದ ಯಾವುದಾದರೂ ಪ್ರದೇಶವನ್ನು ಬಗರ್ ಹುಕುಂ ಸಾಗುವಳಿ ಮಾಡಿದ್ದರೆ ಅದನ್ನು ಸಾಗುವಳಿದಾರರಿಗೆ ಕೊಡುವುದು ಕರ್ತವ್ಯವಲ್ಲವೆ ?

Mr. SPEAKER.—That is a different question.

Lands for Raiyats of Bommanahalli, Chiknayakanahalli Taluk.

Q.—648. Sri C. H. LINGADEVARU (Chiknayakanahalli).—

Will the Government be pleased to state :—

(*a*) since when the people of Bommanahalli, Chiknayakanahalli Taluk, are requesting for the release of lands from Halumalledevara Kaval for gomal and cultivation ;

(*b*) whether records are not being built up in this connection ;

(*c*) when the lands will be released ?

A.— Sri A. G. RAMACHANDRA RAO (Minister for Law and Education).—

(*a*) They applied in the year 1953.

(*b*) Records are built up.

(*c*) The matter is under consideration.

ಶ್ರೀ ಸಿ. ಎಚ್. ಲಿಂಗದೇವರು.—ಬೊಮ್ಮೇನಹಳ್ಳಿ ಗ್ರಾಮಕ್ಕೆ ಗೋಮಾಳವಿದೆಯೆ ?

ಶ್ರೀ ಎ. ಜಿ. ರಾಮಚಂದ್ರರಾವ್.—ಹಾಲುಮಲ್ಲೇದೇವರ ಕಾವಲಿನಲ್ಲಿ 326ನೆಯ ನಂಬರಿನ ಜಮೀನಿನಲ್ಲಿ 530 ಎಕರೆ ಪ್ರದೇಶವನ್ನು ಚಿಕ್ಕನಾಯಕನಹಳ್ಳಿ ತಾಲ್ಲೂಕು ಬೊಮ್ಮನಹಳ್ಳಿ ಮತ್ತು ದೊಡ್ಡಯ್ಯನಕೆರೆ ಗ್ರಾಮಸ್ಥರಿಗೆ ಕೊಡಬೇಕೆಂದು ಆರ್ಡರಾಗಿದೆ. ಅದನ್ನು ಸರ್ಕಾರದವರು ಫಾರೆಸ್ಟ್ ಇಲಾಖೆಗೆ ರೆಫರ್ ಮಾಡಿದ್ದರು, ಆಮೇಲೆ ರೆವೆನ್ಯೂ ಕಮಿಷನರಿಗೆ ರೆಫರ್ ಮಾಡಿದರು, ಅವರಿಂದ ಆಜ್ಞೆರುವರದಿ ಬಂದಿಲ್ಲ.

ಶ್ರೀ ಸಿ. ಎಚ್. ಲಿಂಗದೇವರು.—ಜಾಗ್ರತೆ ಇದನ್ನು ತಿರ್ಮಾನ ಮಾಡುತ್ತೀರಾ ?

ಶ್ರೀ ಎ. ಜಿ. ರಾಮಚಂದ್ರರಾವ್.—ಮಾಡುತ್ತೇವೆ.